**ದಿನಾಂಕಃ 20.03.2019 ರಂದು ಸಾಕ್ಷಿಯನ್ನು ಪಾಟೀ ಸವಾಲಿಗಾಗಿ ಮರಳಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ಎಸ್.ಎ.ಎಚ್. ವಕೀಲರಿಂದ: –**

1. ದಿನಾಂಕ 10-6-1990 ರಂದು ಎದುರುದಾರ ನಡೆಸುತ್ತಿರುವ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸಕ್ಕೆ ಸೇರಿದ್ದೆ. ನನ್ನ ವಿದ್ಯಾರ್ಹತೆ ಬಿ.ಎ., ಬಿ.ಎಡ್. ನಾನು ಮಕ್ಕಳಿಗೆ ಕನ್ನಡವನ್ನು ಬೋಧಿಸುತ್ತಿದ್ದೆ. ನನ್ನ ಮೇಲೆ ಆಡಳಿತ ಮಂಡಳಿಯವರು ಕೆಲವು ನಿರ್ದಿಷ್ಟ ಆಪಾದನೆಗಳನ್ನು ಮಾಡಿ ವಿಚಾರಣೆಗೆ ಆದೇಶ ಮಾಡಿದ್ದರು ಎಂದರೆ ಸುಳ್ಳು ಆಪಾದನೆಗಳನ್ನು ಮಾಡಿದ್ದರು, ವಿಚಾರಣೆ ಆಗಿಲ್ಲ. ನನ್ನ ವಿರುದ್ಧ ವಿಚಾರಣೆ ನಡೆಸಲು ಯು.ಟಿ.ಬಾರಾಟಕ್ಕೆ ಎನ್ನುವ ನ್ಯಾಯವಾದಿಯನ್ನು ನೇಮಿಸಿದ್ದರು ಎಂದರೆ ಸರಿ. ಅವರು ವಿಚಾರಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವರ ಮುಂದೆ ನಾನು ವಿಚಾರಣೆಗೆ ಹಾಜರಾಗಿದ್ದೆ ಎಂದರೆ ಸರಿ. ನನಗೆ ಅವರು ವಿಚಾರಣೆಗಾಗಿ ನೀಡಿದ್ದ ನೊಟೀಸು ತಲುಪಿತ್ತು ಎಂದರೆ ಸರಿ, ಆದರೆ ನನ್ನ ವಿಚಾರಣೆ ಆಗಲಿಲ್ಲ. ಏಕೆಂದರೆ ಅವರು ಅಲ್ಲಿ ಇರಲಿಲ್ಲ.

2. ವಿಚಾರಣೆ ಪೂರ್ವದಲ್ಲಿ ಆಡಳಿತ ಮಂಡಳಿಯವರು ನನಗೆ ನೀಡಿದ್ದ ಆಪಾದನೆಗಳಿಗೆ ನಾನು ಉತ್ತರಿಸಿರಲಿಲ್ಲ ಎಂದರೆ ಸರಿ. ವಿಚಾರಣಾಧಿಕಾರಿಯ ಮುಂದೆ, ನಿಗದಿಪಡಿಸಿದ ದಿನದಂದು ನಾನು ಗೈರು ಹಾಜರಾಗಿದ್ದೇನೆ ಎಂದರೆ ಸರಿಯಲ್ಲ. ನಾನು ವಿಚಾರಣಾಧಿಕಾರಿಯ ಮುಂದೆ, ಗೈರು ಹಾಜರಾಗಿದ್ದು, ಹಾಜರಾಗಿದ್ದೆ ಅವರು ಇರಲಿಲ್ಲ ಎಂದು ತನ್ನ ಪರವಾಗಿ ಸಾಕ್ಷ್ಯ ನುಡಿದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಿನಾಂಕ 22-3-2012 ರಂದು ಆಡಳಿತ ಸಂಸ್ಥೆಯವರು ನನ್ನನ್ನು ಕೆಲಸದಿಂದ ವಜಾ ಮಾಡಿದ್ದ ಆದೇಶ ನನಗೆ ಕೊಟ್ಟಿದ್ದಾರೆ ಎಂದರೆ ಸರಿ. ನಂತರ ನಾನು ಆಡಳಿತ ಮಂಡಳಿಯ ಸದಸ್ಯರನ್ನು ಸಂಪರ್ಕಿಸಿದ್ದೆ. ನಾನು ಸಂಪರ್ಕಿಸಿದ್ದ ಸದಸ್ಯರು; ಅಯ್ಯುಬಖಾನ ಕೆಂಚೆಗೊಪ್ಪ, ಖಲಿಂಮುಲ್ಲಾ ಸೋಮಲಾಪುರ, ಅಕ್ಬರಖಾನ ಕಿರಾಣಿ, ಎಸ್.ಎಸ್.ಮುಲ್ಲಾ ಮತ್ತು ಗರಡಿಮನಿ. ಮೇಲೆ ಹೇಳಿದ ಗರಡಿಮನಿ ಮತ್ತು ನನಗೆ, ಯಾವ ಸಂಬಂಧವೂ ಇಲ್ಲ. ಆದರೆ, ಖಲಿಂಮುಲ್ಲಾರವರ ಜೊತೆಗೆ ನನಗೆ ಸಂಬಂಧವಿದೆ. ಅವರ ಮಗಳನ್ನು ನನ್ನ ಸೊಸೆಯನ್ನಾಗಿ ಮಾಡಿಕೊಂಡಿದ್ದೇನೆ. ಖಲಿಂಮುಲ್ಲಾರವರು ಆಡಳಿತ ಮಂಡಳಿಯ ಸದಸ್ಯರು ಎನ್ನುವ ಬಗ್ಗೆ , ನಾನು ಈ ನ್ಯಾಯಾಲಯದ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಈ ಮೇಲೆ ಹೇಳಿದ ಆಡಳಿತ ಮಂಡಳಿಯ ಸದಸ್ಯರು ಎಂದು ಹೇಳುವ ವ್ಯಕ್ತಿಗಳ ಹೆಸರನ್ನು ನನ್ನ ಪ್ರಮಾಣ-

ಪತ್ರದಲ್ಲಿ ಕಾಣಿಸಿರುವುದಿಲ್ಲ ಇವರುಗಳು ಆಡಳಿತ ಮಂಡಳಿಯ ಸದಸ್ಯರುಗಳಲ್ಲ ಎಂದರೆ ಸರಿಯಲ್ಲ. ಅವರನ್ನೂ ಸಹ ಆಡಳಿತ ಮಂಡಳಿಯ ಸದಸ್ಯತ್ವದಿಂದ 2010ರಲ್ಲಿ ವಜಾ ಮಾಡಿದ್ದರು, ಅದನ್ನು ಅವರು ಪ್ರಶ್ನಿಸಿ ದಾವೆ ಹೂಡಿದ್ದರು, ಆ ದಾವೆ ಬೇಗ ಮುಗಿಯುತ್ತದೆ, ನೀವು ನ್ಯಾಯಾಲಯಕ್ಕೆ ಹೋಗುವುದು ಬೇಡ, ದಾವೆ ಮುುಗಿದ ನಂತರ, ನಿಮ್ಮನ್ನು ಸೇವೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಅವರ ದಾವೆಯ ಸಂಖ್ಯೆ 313/2010, ಅದು ಹಿರೇಕೆರೂರು ನ್ಯಾಯಾಲಯದಲ್ಲಿ ನಡೆಯುತ್ತಿತ್ತು. ಮೇಲ್ಕಂಡ ವ್ಯಕ್ತಿಗಳು ನನಗೆ ಲೇಖನದ ಮೂಲಕ, ನನ್ನನ್ನು ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ವಾಗ್ದಾನ ಕೊಡಲಿಲ್ಲ. ಆ ದಾವೆ ವಜಾಗೊಂಡಿದೆ ಎಂದರೆ ಸರಿ, ಆದರೂ ಅದು ನಡೆಯುತ್ತಿದೆ.

4. ಶಿಕ್ಷಕರು ವಜಾಗೊಂಡರೆ, ಶಿಕ್ಷಕರಿಲ್ಲದಿದ್ದಾಗ ಮಕ್ಕಳಿಗೆ ವಿದ್ಯೆಯ ಬಗ್ಗೆ ತೊಂದರೆಯಾದರೆ, ಅದಕ್ಕೆ ಆಡಳಿತ ಮಂಡಳಿಯವರು ಜವಾಬ್ದಾರರಾಗುತ್ತಾರೆ ಎನ್ನುವುದು ಸರಿ. ಈ ಹಿನ್ನಲೆಯಲ್ಲಿ , ಆಡಳಿತ ಮಂಡಳಿ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಎಂದರೆ ಸರಿ. ಹಾಗೆ ಪರ್ಯಾಯವಾಗಿ ಶಿಕ್ಷಕನಾಗಿ ನೇಮಕಗೊಂಡವರು 5ನೇ ಎದುರುದಾರರು ಎಂದರೆ ಸರಿ. ಆತನನ್ನು ನೇಮಕ ಮಾಡಿಕೊಂಡ ತಕ್ಷಣ, ನಾನು ಈ ಮೇಲ್ಮನವಿ ತಂದಿದ್ದೇನೆ ಎಂದರೆ ಸರಿಯಲ್ಲ.

5. ಆಡಳಿತ ಮಂಡಳಿ ಸರಕಾರದಿಂದ ಸಹಾಯಾನುದಾನಕ್ಕೆ ದಿನಾಂಕ 23-6-2009 ರಲ್ಲಿ ಒಳಪಟ್ಟಿತ್ತು. ನನ್ನ ಹುದ್ದೆ ಸಹ ಸಹಾಯಾನುದಾನಕ್ಕೆ ಒಳಪಟ್ಟಿತ್ತು. ನನಗೆ ಮುಖ್ಯೋಪಾಧ್ಯಾಯನೆಂದು ಪದೋನ್ನತಿ ಸಿಕ್ಕಿತ್ತಾ ಎಂದರೆ ಸಿಕ್ಕಿತ್ತು. ನಾನು ಆಡಳಿತ ಮಂಡಳಿಯ ವಿರುದ್ಧ 10 ಲಕ್ಷ ರೂಪಾಯಿ ದೇಣಿಗೆ ಕೇಳಿದರು ಎಂದು ಬಲವಾದ ಆಪಾದನೆಯನ್ನು ಮಾಡಿದ್ದೆ ಎಂದರೆ ಸರಿ. ಈ ರೀತಿ ಆಪಾದನೆ ಮಾಡುವುದು ಅಪರಾಧ ಎಂದರೆ ಸರಿ. ಸಾಕ್ಷಿ ಮುಂದುವರೆದು , ಅವರು ಕೇಳಿದ್ದರೆಂದು ಹೇಳುತ್ತಾರೆ. ಅವರು ಕೇಳಿದಾಗ, ನಾನು ಆಡಳಿತ ಮಂಡಳಿಯ ವಿರುದ್ಧ ಕಾನೂನು ಕ್ರಮ ಜರುಗಿಸಿಲ್ಲ ಎಂದರೆ ಸರಿ.

6. ಆಡಳಿತ ಮಂಡಳಿ ನನ್ನಿಂದ ಯಾವುದೇ ಆರ್ಥಿಕ ನೆರವನ್ನು ಬಯಸಿರಲಿಲ್ಲ, ಮತ್ತು ಆ ಬಗ್ಗೆ ಬೇಡಿಕೆ ಇಟ್ಟಿರಲಿಲ್ಲ, ಪರ್ಯಾಯವಾಗಿ ನನ್ನ ಕರ್ತವ್ಯ ಲೋಪದಿಂದಾಗಿ ನನ್ನನ್ನು ಆಡಳಿತ ಮಂಡಳಿ ದಿನಾಂಕ 22-03-2012 ರಂದು ಕಾನೂನು ಬದ್ಧವಾಗಿ ವಜಾ ಮಾಡಿರುತ್ತದೆ ಎಂದರೆ ಸರಿಯಲ್ಲ. ವಜಾ ಮಾಡುವುದಕ್ಕೆ ಮುನ್ನ, ನನ್ನ ವಿರುದ್ಧ ಕಾನೂನು ಬದ್ಧವಾಗಿ ಹಾಗೂ ನಿಯಮಾನುಸಾರವಾಗಿ ವಿಚಾರಣೆ ನಡೆದಿರುತ್ತದೆ ಎಂದರೆ ಸರಿಯಲ್ಲ. ವಿಚಾರಣಾ ವರದಿಯ

ಅನುಸಾರ, ನಿಯಮಾನುಸಾರ ನನ್ನನ್ನು ವಜಾ ಮಾಡಲಾಗಿದೆ ಎಂದರೆ ಸರಿಯಲ್ಲ. ನಂತರ, 5 ನೇ ಎದುರುದಾರರನ್ನು ನನ್ನ ಬದಲಿಗೆ ಕೆಲಸಕ್ಕೆ ತೆಗೆದುಕೊಂಡಿದ್ದು, ಅದಕ್ಕೆ ಇಲಾಖೆ ಅನುಮೋದಿಸಿದೆ ಎಂದರೆ ಸರಿ. ಈ ಹಿನ್ನಲೆಯಲ್ಲಿ , ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ವಿಳಂಬಕ್ಕೆ ಪೂರಕವಾದ ಸಂಗತಿಗಳಲ್ಲ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷ್ಯತನ ಮತ್ತು ಉದಾಸಿತನದಿಂದ ನಾನು ಸಕಾಲದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**
**ಓ ಹೇ ಕೇ ಸರಿ ಇದೆ.**

**(ಎಸ್.ಎಚ್. ರೇಣುಕಾದೇವಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾವೇರಿ.